ಅನಿರೀಕ್ಷಿತ ಭೇಟಿ ಕೊಟ್ಟರೆ ಗೊತ್ತಾಗುತ್ತದೆ. ತಮ್ಮ ಕ್ಲಾಸುಗಳನ್ನು ಬೇರೆ ಮಾಸ್ಟರ್‌ಗಳಿಗೆ ವಹಿಸಿ ಅವರು ಬಿಲ್ ಮಾಡಿಕೊಡುತ್ತಿದ್ದಾರೆ ಇವರು ಇದನ್ನು ಏಕೆ ಮಾಡಬೇಕು ? ತಮ್ಮಲ್ಲಿ ಕ್ಲರ್ಕ್ಸ್‌ಗಳಿಗೆ ಕೊರತೆ ಏನಾದರೂ ಇದೆಯೇ ? ಇದರಲ್ಲಿ ತಪ್ಪಿಲ್ಲವೆಂದು ತಾವೇ ಒಪ್ಪುತ್ತಿದ್ದೀರಿ ಇದರ ಅರ್ಥ ಏನು ?

ಶ್ರೀ ಬಿ. ಸೋಮಶೇಖರ್.—ಬೋಧನಾ ಕೃಮಕ್ಕೆ ಯಾವ ರೀತಿಯಲ್ಲೂ ತೊಂದರೆಯಾಗದ ರೀತಿಯಲ್ಲಿ ಮಾಡಿದರೆ ತಪ್ಪೇನೂ ಇಲ್ಲವೆಂದು ನಾನು ಹೇಳಿದ್ದುದು ಬೋಧನೆ ಮಾಡುವುದನ್ನು ಬಿಟ್ಟು ಈ ಕೆಲಸ ಮಾಡುತ್ತಿದ್ದರೆ ಅಂತಹವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ ಮಂತ್ರಿ ನಾನು ಅನಿರೀಕ್ಷಿತವಾಗಿ ಭೇಟಿ ಕೊಡುತ್ತೇನೆ.

ಶ್ರೀ ಬಿ. ಬಿ. ಶಂಕರ್.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ದೊಡ್ಡ ಮೇಟಿಯವರು ಮಾತನಾಡಿದ ವಿಷಯದ ಬಗ್ಗೆ ನಾನೂ ಸಹ ಮಾತನಾಡಬೇಕೆಂದು ತಮ್ಮನ್ನು ಪ್ರಾರ್ಥಿಸಿ ಕೊಂಡಿದ್ದೇನೆ. ಕೆಲವು ಶಿಕ್ಷಕರನ್ನು ಎ. ಇ. ಓ.ಗಳನ್ನು ಒಳಗೆ ಹಾಕಿಕೊಂಡು ಕೆಲಸಗಳನ್ನು ಮಾಡುತ್ತಿದ್ದಾರೆ. ಇದರಿಂದ ಶಿಕ್ಷಕರ ಅವನತಿಗೆ ಶಿಕ್ಷಕರೇ ಕಾರಣರಾಗುತ್ತಾರೆ. ಉದಾಹರಣೆಗೆ ನಮ್ಮ ಚಿಕ್ಕಮಗಳೂರಿನಲ್ಲಿ ಈ ರೀತಿ ನಡೆಯುತ್ತಿದೆ. ನಮ್ಮಲ್ಲಿ ಶಿಕ್ಷಕರು ಒಳ್ಳೆ ಕಡಿಮೆ ಇದ್ದಾರೆ. ಶಿಕ್ಷಕರು ಪಾಠ ಹೇಳುವುದನ್ನು ಬಿಟ್ಟು ಆಫೀಸಿಗೆ ಹೋಗಿ ಪರ್ಮನೆಂಟಾಗಿ ಈ ಧಂಧೆ ಮಾಡುತ್ತಿದ್ದಾರೆ. ದಯವಿಟ್ಟು ಯಾವುದೇ ಕಾರಣದಿಂದ ಶಿಕ್ಷಕರು ಆಫೀಸಿಗೆ ಹೋಗಿ ಕೆಲಸ ಮಾಡುವುದನ್ನು ತಡೆಗಟ್ಟಿದಿದ್ದರೆ ಶಿಕ್ಷಕರಿಂದಲೇ ಶಿಕ್ಷಕರ ಲೂಟಿ ಆಗುತ್ತದೆ. ಈ ಬಗ್ಗೆ ದೊಡ್ಡಮೇಟಿಯವರಧ್ವನಿಗೆ ನನ್ನ ಧ್ವನಿಯನ್ನೂ ಒಂದುಗೂಡಿಸುತ್ತೇನೆ.

ಶ್ರೀ ಬಿ. ಸೋಮಶೇಖರ್.—ಅಂಥದ್ದರ ಬಗ್ಗೆ ನಮ್ಮ ಗಮನಕ್ಕೆ ತಂದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ನೀವು ೧೦ ಪ್ರಶ್ನೆಗಳನ್ನು ಕೇಳಿದ್ದೀರಿ. ಶ್ರೀ ದೇವೇಗೌಡರು ಸದನದಲ್ಲಿ ಇಲ್ಲ, ನಂತರ ತಮಗೆ ಉತ್ತರ ತರಿಸಿಕೊಡುತ್ತೇನೆ.

ಶ್ರೀ ವೀರಪ್ಪ ಮೊಯಿಲಿ.—ಇಪ್ಪೊತ್ತು ಮಾನ್ಯ ದೇವೇಗೌಡರು ಇಲ್ಲ, ನಾಳೆ ಬರಬಹುದು, ಅವರ ಹತ್ತು ಪ್ರಶ್ನೆಗಳನ್ನು ನಾಳೆಗೆ ಹಾಕಿಸಿ.

ಅಧ್ಯಕ್ಷರು.—ನೋಡೋಣ. I will look into it. I will try my level best...

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಉತ್ತರವನ್ನು ಯಾವಾಗ ತರಿಸಿಕೊಡುತ್ತೀರಿ.

ಅಧ್ಯಕ್ಷರು.—ಹೇಳಿದ್ದೇನಲ್ಲ, I will try my level best.

ಶ್ರೀ ಎಂ. ವೀರಪ್ಪ ಮೊಯಿಲಿ.—ತಮ್ಮಿಂದ ಆ ನುಡಿಮುತ್ತುಗಳು ಬರಲಿ, ನಾಳೆಗೆ ಆ ಎಲ್ಲಾ ಪ್ರಶ್ನೆಗಳು ಬರಲಿ.

ಮಿನಾಂಗಾರರಿಗೆ ನೀಡುತ್ತಿರುವ ಡೀಸಲ್ ಸಬ್ಸಿಡಿ ಹಣದ ಮೊತ್ತ

೧೨೫೧. ಶ್ರೀ ಎಸ್. ಎಂ. ಅಡ್ಯಂತಾಯ (ಸುರತ್ಕಲ್).—ಮಾನ್ಯ ಮೀನುಗಾರಿಕೆ ಮತ್ತು ಬಂದರು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಮೀನುಗಾರರಿಗೆ ನೀಡುತ್ತಿರುವ ಡೀಸಲ್ ಸಬ್ಸಿಡಿ ಹಣದ ಮೊತ್ತವೆಷ್ಟು ?

ಆ) ಮೀನುಗಾರರಿಗೆ ಕೊಡಬೇಕಾಗಿರುವ ಡೀಸಲ್ ಸಬ್ಸಿಡಿ ಬಾಕಿ ಎಷ್ಟು ?

ಇ) ಈ ಬಾಕಿ ಹಣ ಪಾವತಿ ಮಾಡಲು ಮೀನುಗಾರಿಕೆ ಇಲಾಖೆಯವರು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ರಘುಪತಿ (ಮೀನುಗಾರಿಕೆ ಮತ್ತು ಬಂದರು ಸಚಿವರು).—

ಅ) ವಿವಿಧ ರೀತಿಯ ಯಾಂತ್ರೀಕೃತ ದೋಣಿಗಳಿಗೆ ಮೀನುಗಾರಿಕೆ ಋತುವಿನಲ್ಲಿ (ಸೆಪ್ಟೆಂಬರ್–ಮೇ) ಲಭ್ಯವಿರುವ ಸಹಾಯ ಧನದ ಗರಿಷ್ಠ ಮಿತಿ ಈ ಕೆಳಗಿನಂತಿದೆ.—

೧) ಪರ್ಸಿನ್	...	ರೂ. ೯,೦೦೦–೦೦
೨) ಟ್ರಾಲರ್ಸ್	...	ರೂ. ೩,೦೦೦–೦೦
೩) ಗಿಲ್‌ನೆಟ್ಟರ್ಸ್	...	ರೂ. ೧,೦೦೦–೦೦

೧೯೮೭–೮೮ನೇ ಸಾಲಿನಲ್ಲಿ, ರೂ. ೪೮.೨೫ ಲಕ್ಷ ಅನುದಾನ ನೀಡಲಾಗಿದೆ.

ಆ) ಸುಮಾರು ರೂ. ೧೦.೫೦ ಲಕ್ಷಗಳು.

ಇ) ಬಾಕಿ ಕ್ಲೇಮ್‌ಗಳನ್ನು ಈ ಆರ್ಥಿಕ ವರ್ಷದಲ್ಲಿಯೇ ತೀರ್ಮಾನಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಎನ್. ಎಂ. ಆಡ್ಯಂತಾಯ.—ಮಾನ್ಯ ಅಧ್ಯಕ್ಷರೇ, ನಾನು ಕೇಳಿದ ಪ್ರಶ್ನೆ ರಾಜ್ಯದಲ್ಲಿ ಮೀನುಗಾರರಿಗೆ ಡೀಸೆಲ್ ಸಬ್ಸಿಡಿ ಹಣದ ಬೊತ್ತ ಎಷ್ಟು. ಆದರೆ ಇಲ್ಲಿ ಪರಿಶೀಲನೆಯಲ್ಲಿ ೯ ಸಾವಿರ ಎಂದು ಹೇಳಿದ್ದಾರೆ. ಟ್ರಾಲರ್ಸ್‌ಗೆ ೩ ಸಾವಿರ, ಗಿಲ್‌ನೆಟ್ಟರ್ಸ್‌ಗೆ ೧ ಸಾವಿರ ಎಂದು ಹೇಳಿದ್ದೀರಿ. ಆದನ್ನು ಯಾವ ರೀತಿ ಕೊಡುತ್ತಿದ್ದೀರಿ, ಒಂದು ರವಾನಿಕೆಗೆ ಎಂದು ಕೊಡುತ್ತೀರಾ ? ದೋಣಿಗಳನ್ನು ಓಡಿಸಿದರೆ ಕೊಡುತ್ತೀರಾ ? ಅಥವಾ ಓಡಿಸಿದಿದ್ದರೆ ೯ ಸಾವಿರ ಕೊಡುತ್ತೀರಾ ? ಈ ಹಣವನ್ನು ಒಂದು ಸೀಸನ್‌ಗೆ ಕೊಡುತ್ತೀರಾ ಎನೋ ಎಂದು ಸರಿಯಾಗಿ ಹೇಳಿಲ್ಲ. ಅದೇ ರೀತಿಯಾಗಿ ಒಂದು ವರ್ಷಕ್ಕೆ ಟೋಟಲ್ ಎಷ್ಟು ಕೊಟ್ಟಿದ್ದೀರಿ? ಒಂದು ವರ್ಷದಲ್ಲಿ ಒಂದೊಂದೇ ಪರಿಶೀಲನೆ ಮಾಡಿ, ಎಷ್ಟು ಜನರಿಗೆ ಕೊಟ್ಟಿದ್ದೀರಿ ? ಇನ್ನೂ ಎಷ್ಟು ಕಡೆಯಲ್ಲಿ ಕೊಡಬೇಕಂ, ಬಾಕಿ ಕೊಡುವುದಾದರೆ ಅವರುಗಳು ಕ್ಲೈಮ್ ಮಾಡಿದ್ದಾರೆಯೇ, ಕ್ಲೈಮ್ ಮಾಡದೇ ಇದ್ದರೆ ಅದನ್ನು ಏಕೆ ಹೇಳಲಿಲ್ಲ?

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ನಾನು ವಿವರಗಳನ್ನು ಹೇಳಿದ್ದೇನೆ. ೧೯೮೭–೮೮ ರಲ್ಲಿ ೪೮.೨೫ ಲಕ್ಷ ನೀಡಿದ್ದೇವೆ. ಎಷ್ಟು ಜನರಿಗೆ ಕೊಟ್ಟಿದ್ದೀರೆಂದು ಕೇಳಿದ್ದಾರೆ, ಅದರ ಬಗ್ಗೆ ಪೂರ್ಣವಾಗಿ ವಿವರವುಳ್ಳ ಒಂದು ಪಟ್ಟಿಯನ್ನು ಸದನಕ್ಕೆ ನಂತರ ಕಳಿಸಿಕೊಡುತ್ತೇನೆ. ಸುಮಾರು ೧೦ ವರೆ ಲಕ್ಷ ಬಾಕಿ ಇದೆ ಇಷ್ಟೇ ತಿಂಗಳಲ್ಲಿ ಮೀನುಗಾರಿಕೆ ಕೆಲಸವನ್ನು ಮಾಡಿಕೊಂಡು ಹೋಗುತ್ತೇವೆಂದು ಹೇಳುವುದು, ಕಷ್ಟ. ಕೆಲಸದವರು ಸೀಸನ್‌ನಲ್ಲಿ ಹೊಗುತ್ತಾರೆ. ಮತ್ತೆ ಕೆಲವರು ಸೀಸನ್ ಬಿಟ್ಟು ಹೋಗುತ್ತಾರೆ. ಮೀನುಗಾರಿಕೆ ಋತು ಬಿಟ್ಟು ಬೇರೆ ಋತುವಿನಲ್ಲಿ ಡೀಸೆಲ್ ಬಳಸಿ ಮೀನುಗಳನ್ನು ಹಿಡಿಯಲು ಹೋದರೆ ಅವರಿಗೆ ಪರಿಹಾರ ಕೊಡಲು ಅವಕಾಶವಿಲ್ಲ. ಆದರೂ ಈ ವರ್ಷಕ್ಕೆ ಆ ನಿಯಮವನ್ನು ಸಡಿಲಗೊಳಿಸಿ, ಪರಿಹಾರ ಕೊಡಲು ವಿಪಾರ್ಡು ಮಾಡಿದ್ದೇವೆ. ಬಾಕಿ ಉಳಿಯಲು ಋತು ಬಿಟ್ಟು ಹೋಗುವುದು ಕಾರಣ. ಯಾವುದಾದರೂ ಬಿಲ್ಲುಗಳು ಬಂದರೆ ಅದನ್ನು ಫೆಡರೇಶನ್ ಮತ್ತು ಕೋ–ಆಪರೇಟೀವ್ ಸೊಸೈಟಿ ಮುಖಾಂತರ ಹಣವನ್ನು ಪಾವತಿ ಮಾಡುವುದಕ್ಕೆ ವಿಪಾರ್ಡು ಮಾಡುತ್ತೇವೆ.

ಶ್ರೀ ಎನ್.ಎಂ. ಆಡ್ಯಂತಾಯ —ಮಾನ್ಯ ಅಧ್ಯಕ್ಷರೇ, ಮೀನುಗಾರರಿಗೆ ಸಹಾಯಧನವನ್ನು ಡೀಸೆಲ್ ಲೀಟರ್ ಲೆಕ್ಕದಲ್ಲಿ ಕೊಡುತ್ತಾರೋ ಅಥವಾ ಒಂದು ಋತುವಿನ ಲೆಕ್ಕದಲ್ಲಿ ಕೊಡುತ್ತಾರೋ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಲಿಲ್ಲ?

ಶ್ರೀ ಎಂ. ರಘುಪತಿ.—ಒಂದು ಲೀಟರ್‌ಗೆ ಇಷ್ಟು ಎಂದು ಸಹಾಯಧನ ಕೊಡುತ್ತೇವೆ.

ಶ್ರೀ ಎನ್.ಎಂ. ಆಡ್ಯಂತಾಯ.—ಇಲ್ಲಿ ಕೊಟ್ಟಿರುವ ಕನ್ನಡದ ಉತ್ತರದಲ್ಲಿ ೪೮.೨೫ ಲಕ್ಷ ಅನುದಾನ ನೀಡಲಾಗಿದೆ ಎಂದು ಹೇಳಿದ್ದರೆ ಇಂಗ್ಲೀಷ್‌ನ ಉತ್ತರದಲ್ಲಿ ಇಷ್ಟು ಹಣವನ್ನು ಕೊಡಲು ಪ್ರಾವಿಜನ್ ಮಾಡಲಾಗಿದೆ ಎಂದು ಹೇಳಿದ್ದಾರೆ. ಆಂದರೆ ಇದರಲ್ಲಿ ಯಾವ ಉತ್ತರ ಸರಿ? ಹಣ ಕೊಟ್ಟಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ಹೇಳಬೇಕು?

ಶ್ರೀ ಎಂ. ರಘುಪತಿ.—೪೮.೨೫ ಲಕ್ಷ ಅನುದಾನವನ್ನು ಕೊಟ್ಟಿದ್ದೇನೆ. ಪರ್ಸಿಯನ್‌ಗೆ ೯ ಸಾವಿರ ರೂಪಾಯಿಗಳ ಪ್ರಕಾರ, ಟ್ರಾಲರ್ಸ್‌ಗೆ ೩ ಸಾವಿರ ರೂಪಾಯಿಗಳ ಪ್ರಕಾರ ಮತ್ತು

ಗಿಲ್‌ನೆಟ್ಟರ್ಸ್‌ಗೆ ಒಂದು ಸಾವಿರ ರೂಪಾಯಿಗಳ ಪ್ರಕಾರ ಹಣ ಪಾವತಿ ಆಗಿದೆ, ಆದಕ್ಕಿಂತ ಜಾಸ್ತಿ ಆಗಿಲ್ಲ ಎಂಬುದಕ್ಕೆ ಈ ಒಂದು ಲೆಕ್ಕವನ್ನು ಕೊಡಲಾಗಿದೆ.

ಶ್ರೀ ಎನ್.ಎಂ. ಅಡ್ಯಂತಾಯ.—ಒಂದು ವೇಳೆ ಯಾರಾದರೂ ಒಂದು ಮೀನುಗಾರಿಕೆ ರಂತುವಿನಲ್ಲಿ ಪರ್ಸಿಯನ್‌ಗೆ ಸಂಬಂಧಪಟ್ಟಂತೆ ೯ ಸಾವಿರ ರೂಪಾಯಿಗಳಿಗಿಂತ ಹೆಚ್ಚು ಡೀಸೆಲ್‌ನ್ನು ಬಳಸಿದ್ದರೆ. ಟ್ರಾಲರ್ಸ್‌ಗೆ ಸಂಬಂಧಪಟ್ಟಂತೆ ೩ ಸಾವಿರ ರೂಪಾಯಿಗಳಿಗಿಂತ ಹೆಚ್ಚು ಡೀಜಲ್‌ನ್ನು ಬಳಸಿದ್ದರೆ ಹಾಗೂ ಗಿಲ್‌ನೆಟ್ಟರ್ಸ್‌ಗೆ ಸಂಬಂಧಪಟ್ಟಂತೆ ಒಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚು ಡೀಸೆಲ್‌ನ್ನು ಬಳಸಿದ್ದರೆ ಅಂತಹವರಿಗೂ ಸಹ ಸಹಾಯಧನವನ್ನು ಕೊಡುತ್ತೀರಾ?

ಶ್ರೀ ಎಂ. ರಘುಪತಿ.—ಕೊಡುತ್ತೇವೆ.

ಅಧ್ಯಕ್ಷರು.—ಈಗ ಮಾನ್ಯ ಪಂಪಾಪತಿ ಅವರು ತಮ್ಮ ಪ್ರಶ್ನೆಯನ್ನು ಹಾಕಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ವಿದ್ಯಾ ಮಂತ್ರಿಗಳು ಸಭೆಯಲ್ಲಿ ಇಲ್ಲ.

ಅಧ್ಯಕ್ಷರು —ಅವರನ್ನೂ ಕರೆಯಿಸಂತ್ತೇನೆ. ತಾವು ಕುಳಿತುಕೊಳ್ಳಿ.

ಶ್ರೀ ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೇ, ನಾನು ಮೇಲ್ಮನೆಗೆ ಹೋಗಿದ್ದೆ. ಈಗ ಮಾನ್ಯ ಪಂಪಾಪತಿ ಅವರ ಪ್ರಶ್ನೆಗೆ ಉತ್ತರ ಕೊಡುತ್ತೇನೆ.

ಪ್ರೌಢ ಶಾಲೆ ಮತ್ತು ಜೂನಿಯರ್ ಕಾಲೇಜುಗಳಲ್ಲಿ ವಸೂಲ್ಮಾಡುತ್ತಿರುವ ಪ್ರಯೋಗ ಶಾಲೆಯ ಶುಲ್ಕ

೧೨೬೩. ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರೌಢ ಶಾಲೆ ಮತ್ತು ಜೂನಿಯರ್ ಕಾಲೇಜುಗಳಲ್ಲಿ ವಸೂಲ್ಮಾಡುತ್ತಿರುವ ಪ್ರಯೋಗ ಶಾಲೆಯ ಶುಲ್ಕವನ್ನು ಸರಿಯಾಗಿ ಉಪಯೋಗ ಮಾಡಲಾಗುತ್ತಿದೆಯೇ?

ಆ) ಪ್ರೌಢ ಶಾಲೆ ಮತ್ತು ಜೂನಿಯರ್ ಕಾಲೇಜುಗಳಲ್ಲಿ ಈ ರೀತಿ ವಸೂಲಾದ ಹಣವನ್ನು ಆಯಾ ಶಾಲೆ ಮತ್ತು ಕಾಲೇಜುಗಳಲ್ಲಿ ಅವಶ್ಯಕತೆಗೆ ತಕ್ಕಂತೆ ಅವರವರೇ ಖರ್ಚು ಮಾಡಲು ಏಕೆ ಅವಕಾಶ ನೀಡಬಾರದು.

ಇ) ಈ ರೀತಿ ಮಾಡಲು ಅವಕಾಶವನ್ನಿಯದಿರುವುದರಿಂದ ಅನೇಕ ಶಾಲೆ ಕಾಲೇಜುಗಳಿಗೆ ಪ್ರಯೋಗ ಶಾಲೆಗಳಿದ್ದರೂ ಅವಶ್ಯ ವಸ್ತುಗಳಿಲ್ಲದೆ ನಿರುಪಯುಕ್ತವಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಾಲೆ ಶಿಕ್ಷಣ ಮಂತ್ರಿಗಳು).—

ಅ) ವಸೂಲಾದ ಹಣವನ್ನು ರಾಜ್ಯದ ರಾಜ್ಯಸ್ವ ನಿಧಿಗೆ ಜಮಾ ಮಾಡಲಾಗುತ್ತಿದೆ.

ಆ) ಪ್ರೌಢ ಶಾಲೆಗಳಲ್ಲಿ ಪ್ರಯೋಗಾಲಯಗಳ ವೆಚ್ಚಕ್ಕೆ ಬೇಕಾದ ಹಣಕ್ಕೆ ಆಯವ್ಯಯದಲ್ಲಿ ಸೂಕ್ತ ಏರ್ಪಾಟು ಮಾಡಿಕೊಳ್ಳುವಂತೆ ಕ್ರಮ ಕೈಗೊಂಡಿದೆ ಮತ್ತು ಕಿರಿಯ ಕಾಲೇಜುಗಳ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹೌದು.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಧರ್ಮಪ್ಪ.—ಅನೇಕ ಶಾಲಾ ಕಾಲೇಜುಗಳಲ್ಲಿ ಲ್ಯಾಬರೇಟರಿಯಲ್ಲಿ ಏನೇನೂ ಇಲ್ಲದಿರುವುದು ಇದೆ. ಆಯಾಯ ಕಾಲೇಜುಗಳಲ್ಲಿ ವಸೂಲಾದ ಹಣವನ್ನು ಅಲ್ಲಿಗೆ ಏತಕ್ಕೆ ಖರ್ಚು ಮಾಡಬಾರದು ? ಅದಕ್ಕೆ ಸರಿಯಾದ ಉತ್ತರ ಬಂದಿಲ್ಲ. ಆಯಾಯ ಕಾಲೇಜಿನಲ್ಲಿ ವಸೂಲಾದ